ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಕಾಗೆ ಕೆಟ್ಟದ್ದಕ್ಕೂ ಒಳ್ಳೆಯದಕ್ಕೂ ಕಾವ್ ಕಾವ್ ಅನ್ನತ್ತೆ. ಮಂತ್ರಿಗಳು?*



ಕಂಡಿದ್ದಕ್ಕೂ, ಕೇಳಿದ್ದಕ್ಕೂ ಲಾವ್ ಲಾವ್ ಎನ್ನುತ್ತಾರೆ.

ಆನಂದ್, ಕೆ.ಆರ್. ನಗರ

*ಬ್ಯಾಂಕುಗಳಲ್ಲಿ ಸಾಲ ಪಡೆಯಲು ವಿಷ ಅಥವಾ ವೀಸಾ ಹೊಂದಿರಬೇಕೆಂಬುದು ಮಾನದಂಡವೆ?*

ಹಾಗೇನಿಲ್ಲ. ಮಾನ ದಂಡವಾಗಿದ್ದರೂ ಸಾಕು.

ಎಸ್.ಎ. ಮೋಹನರಾಜು, ಶಿವಮೊಗ್ಗ

*ಹೌಸ್‌ವೈಫ್‌ಗೆ ಹೌಸ್ ಹಸ್ಬೆಂಡ್ ಸಿಕ್ಕರೆ ಏನಾಗಬಹುದು ರಾಮ್‌ಜೀ?*

'ಮನೆ ತಿಂಡಿ' ಹೋಟೆಲ್‌ನ ಸ್ಥಾಪನೆ.

ನೇರಲಗುಡ್ಡ ಶಿವಕುಮಾರ್, ಶಿರಾ

*ಆರಕ್ಷಕ ಠಾಣೆಯೆಂದರೆ ರಾಕ್ಷಸರೇ ತುಂಬಿರುವ ನರಕವಂತೆ. ನಿಜವೆ?*

ಠಾಣೆ ನೀರಿನಂತಿರುತ್ತದೆ. ಮೇಲಿನವರು ಕೊಳಕಾದರೆ ಠಾಣೆ ಬಗ್ಗಡ; ಮೇಲಿನವರು ಶ್ರೇಷ್ಠರಾದರೆ ಠಾಣೆ ತೀರ್ಥ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ಎಲ್ಲರೂ ಸಸ್ಯಾಹಾರಿಗಳೇ ಆದರೆ ಒಳ್ಳೆಯದು ಅಲ್ಲವೇ ಸಾರ್?*




ಆಗ ಭೂಮಿ ಆಡು, ಹಂದಿ, ಜಿಂಕೆ, ಮೊಲಗಳಿಂದ; ಸಮುದ್ರ ಮೀನುಗಳಿಂದ ಹೌಸ್‌ಫುಲ್ ಆಗಿಹೋಗುತ್ತದೆ.

ಮುರಲೀಧರ ಕುಲಕರ್ಣಿ, ಬೀದರ್

*ನಮ್ಮ ಸುಪ್ರಸಿದ್ಧ ದೇವರುಗಳೆಲ್ಲ ಬೆಟ್ಟದ ಮೇಲೆಯೇ ಏಕೆ ಠಿಕಾಣಿ ಹೂಡಿದ್ದಾರೆ?*

ಎತ್ತರದಲ್ಲಿದ್ದರೆ ತನ್ನೆಲ್ಲ ಭಕ್ತರ ಮೇಲೂ ಕಣ್ಣಿಡಬಹುದೆಂದು!

ವಿ.ಎಂ. ಮೇಗೂರ, ಧಾರವಾಡ

*ಮಸಣದ ಹೂವಿಗೂ, ಬಾಡದ ಹೂವಿಗೂ ಏನು ವ್ಯತ್ಯಾಸ?*

ಮಸಣದ ಹೂವಿನೆದುರು ದಿನವೂ ಕಟ್ಟಿಗೆ; ಬಾಡದ ಹೂ ತೀರಿಹೋದವರ ಪಟದ ಚೌಕಟ್ಟಿಗೆ.

ಓಂ ಚನ್ನೇಶ್, ಭದ್ರಾವತಿ

*ಪಾಪ ಮಾಡಿದವನಿಗೆ ಪಾಪಿ ಅಂತಾರೆ. ಪುಣ್ಯ ಮಾಡಿದವನಿಗೆ?*

ಅಯೋಗ್ಯ, ಮುಟ್ಠಾಳ, ಬದುಕಲು ಬಾರದವನು, ಮೂಸಂಡಿ, ಹೇಡಿ.... ಇನ್ನೂ ಏನೇನೋ ಪ್ರಿಂಟಿಸಲಾಗದ್ದನ್ನೆಲ್ಲಾ ಅನ್ನುತ್ತಾರೆ.

ಮಹಾಂತಯ್ಯಾ ಕೆ. ಮಠ, ಬಂದರವಾಡ

*ನಮ್ಮ ಬೆನ್ನು ನಮಗೆ ಕಾಣುವುದಿಲ್ಲ. ಏಕೆ?*

ವಿನ್ಯಾಸದೋಷ! ಹಣೆಗೊಂದು, ಹಿಂಬುರುಡೆಗೊಂದು ಕಣ್ಣಿದ್ದಿದ್ದರೆ ಸಕಲವೂ ಕಾಣುತ್ತಿತ್ತು.

ಡೈರಿ ವಿಶ್ವನಾಥ್, ಬೆಂಗಳೂರು

*ನಿಮಗೆ ವಶೀಕರಣ ಗೊತ್ತೆ?*

ಇನ್ನೂ ಹೆಚ್ಚಿನದು ಗೊತ್ತು– ಕುರೂಪಿಯನ್ನು ಸುಂದರಿಯಾಗಿಸುವ ಬ್ಯೂಟಿ ಪಾರ್ಲರ್‌ಗಳ ಊರ್ವಶೀಕರಣ.

ಟಿ.ಆರ್. ರವೀಂದ್ರ, ಬೆಂಗಳೂರು

*ನಾವೀಗ ಮನುಷ್ಯರೂಪದಲ್ಲಿರುವ ರಾಕ್ಷಸರನ್ನು ಕಾಣುತ್ತಿದ್ದೇವೆ. ಮನುಷ್ಯರೂಪದಲ್ಲಿರುವ ದೇವರೇಕೆ ಕಾಣಸಿಗುವುದಿಲ್ಲ?*

ಕನ್ನಡಿ ನೋಡಿಕೊಳ್ಳಿ. ಮೊದಲಿಗೆ ನಿಮ್ಮಲ್ಲಿ ದೇವರು ಕಂಡರೆ ಅನ್ಯರಲ್ಲೂ ಕಂಡೀತು.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಹಿಂಬದಿ ಸವಾರರಿಗೆ ಹೆಲ್ಮೆಟ್ ಕಡ್ಡಾಯ ಮಾಡಿರುವುದು ಪ್ರೇಮಿಗಳಿಗೆ ಅನುಕೂಲವಾಗಿದೆ ಅಲ್ಲವೆ?*

ಊಹೂಂ. ನಲ್ಲೆ ಮುಂದೆ ಬಾಗಿ ನಲ್ಲನ ಕಿವಿಯಲ್ಲಿ ಮುದ್ದುಮಾತುಗಳನ್ನು ಆಡುವ ಛಾನ್ಸೇ ತಪ್ಪಿಹೋಯಿತು.

ಪೂರ್ಣಿಮಾ ಹೆಜ್ಮಾಡಿ, ಸಾಂಗ್ಲಿ

*ಉತ್ತರಪತ್ರಿಕೆಯಲ್ಲಿ ಉತ್ತರದ ಬದಲು ಸಿನೆಮಾ ಹಾಡನ್ನು ಬರೆಯುವ ವಿದ್ಯಾರ್ಥಿಗಳಿಗೆ ಏನೆನ್ನಬೇಕು ರಾಮ್?*

ತಮ್ಮ ಭವಿಷ್ಯವನ್ನೂ ಲೆಕ್ಕಿಸದೆ ಮೌಲ್ಯಮಾಪನ ಮಾಡುವವರ ಬೇಸರ ಕಳೆಯಲು ಯತ್ನಿಸುವ ಹೃದಯವಂತರು.

ಎಂ.ಎ. ಕುಮಾರ್, ಬೆಂಗಳೂರು

## ಬಹುಮಾನಿತ ಪ್ರಶ್ನೆ

ಎಸ್ಸೆನ್ಕೆ, ಕಡೂರು

*ಹಣವನ್ನು ನೀರಿನಂತೆ ಖರ್ಚು ಮಾಡ್ತಾನೆ ಅನ್ನೋ ಕಾಲ ಹೋಗಿ ನೀರನ್ನು ಹಣದಂತೆ ಖರ್ಚು ಮಾಡ್ತಾನೆ ಅನ್ನೋ ಕಾಲ ಬಂತಲ್ಲಾ...?*

ಇದು ವಾಸಿ. ಚಿನ್ನದ ಗಟ್ಟಿಗಳಂತೆಯೇ ನೀರಿನ ಗಟ್ಟಿಗಳನ್ನು ಫ್ರೀಜಿಂಗ್ ಲಾಕರ್‌ಗಳಲ್ಲಿ ಇಡುವ ಕಾಲ ಮುಂದಿದೆ.

*ಇಂದು, ನಾಳೆ ಎಂದು ಹುಟ್ಟುವ ದಿನಾಂಕವನ್ನು ನಿರೀಕ್ಷಿಸುವ ನಾವು ಸಾವಿನ ದಿನಾಂಕವನ್ನು ನಿರೀಕ್ಷಿಸುವಂತಿದ್ದರೆ ಹೇಗೆ?*

ಆಸ್ತಿ ಮಾಡಿ, ವಿಲ್ ಮಾಡಿ ನೋಡಿ. ನಿರೀಕ್ಷಿಸುವವರ ಪಡೆಯೇ ಇರುತ್ತದೆ.

ಅನಂತಪದ್ಮನಾಭ ಹೆಚ್.ಎಂ. ಮೈಸೂರು

*ಹೆಂಡತಿಯ ಮುನಿಸಿಗೂ, ಪ್ರೇಯಸಿಯ ಹುಸಿನಗೆಗೂ ಸಾಮ್ಯವೇನು?*

ಎರಡರಿಂದಲೂ ಬ್ಯಾಂಕ್ ಬ್ಯಾಲೆನ್ಸ್ ಖೋತಾ ಖಚಿತ.

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

ಮಹಾವೀರ ಕಾಸರ, ಶಿವಮೊಗ್ಗ

*ಕಾರ್ಯಕ್ರಮವೊಂದರಲ್ಲಿ 'ಅಧರದ ಸ್ವಾಗತ' ಎಂದು ಬೋರ್ಡ್ ಹಾಕಿರುವುದರ ಅರ್ಥವೇನು?*




ಚುಂಬಿಸಲು ಮುಕ್ತ ಆಹ್ವಾನವಂತೆ ಮುದ್ದಾದ ಕಂದನ ಜನ್ಮದಿನದ ಕಾರ್ಯಕ್ರಮವದು.

*'ಕುಬೇರನಿಗೇನಿರಬೇಕು'; ಈ ಪದಕ್ಕೆ ಎರಡು ತಲೆ, ಒಂದೇ ದೇಹ ಅಲ್ಲವೇ ಅಂತಾಳಲ್ಲಾ?*

'ವಾರೆವಾ' ಎನ್ನುತ್ತಾ ಅಹುದಹುದೆನ್ನಲು ಮೇಲೆ, ಕೆಳಕ್ಕೆ 'ತಲೆಯಲೆತ' ಆಗಲಿ.

ಹೇ.ಕ.ಮಂ. ಮದ್ಯಸ್ಥ, ಫಲ್ಗುಣಿ

*ತಮ್ಮ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸುವ ವಯಸ್ಕರು ತಮ್ಮ ಸಾವು ಹತ್ತಿರವಾಯಿತಲ್ಲಾ ಎಂದೇಕೆ ಚಿಂತಿಸುವುದಿಲ್ಲ?*

ಬದುಕೊಂದು ಸಂಭ್ರಮ; ಸಾವು ಉತ್ಸವ ಎಂದು ತಿಳಿದವರಿಗೆ ಚಿಂತೆಯ ಅಗತ್ಯವೇ ಇಲ್ಲ.

■ ರಾಮ್